ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋರಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋರಿ.	ಹರಾಜು ತಾರೀಖು.		ಅಂದಾಜು ಟನ್‌ಗಳು ಸ್ಟಾಕ್ ಪೆಟ್ಟಿಗೆ ಕಡಿನ.	ಪರಾ.
ಮೈಸೂರು ...	ಮಾಣಜೂರು ...	1904ನೆ ಇಸವಿ ನವಂಬರ್ ತಾರೀಖು	1	500	
ಡಿಟೋ	ಶ್ರೀರಂಗಪಟ್ಟಣ	ಡಿಟೋ	ಡಿಟೋ	23	240	
ಬೆಂಗಳೂರು ...	ಬಂಗಳೂರು .	ಡಿಟೋ	ಡಿಟೋ	23	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸಂಬರ್ ತಾರೀಖು	1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ	ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ	ಡಿಟೊ	8	250	
ಶಿವಮೊಗ್ಗ ..	ಶಿವಮೊಗ್ಗ ...	ಡಿಟೋ	ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಡಿಟೋ ..	ಸಾಗರ .	ಡಿಟೋ	ಡಿಟೋ	15	175	
ಡಿಟೋ ..	ತೀರ್ಥಹಳ್ಳಿ .	ಡಿಟೋ	ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.

೨. ಪ್ರತಿಬಂದು ಕೋರಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಪೂರ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಅಕ್ಟೋಬರು ಅಖೈರು ಒಳಗಾಗಿ ಫೈಯಿಷು ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕಾರ್ಯಸರ್ವೇಟರಿ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ಕೋಲಾರ ಡಿಸ್ಟ್ರಿಕ್ಟ್.

ನೋಟಿಸು.

ತಾರೀಖು 4ನೆ ಮಾಹೆ ನವಂಬರ್ 1904ನೆ ಇಸವಿ.

ಗವರ್ನಮೆಂಟ್ 1903ನೆ ಇಸವಿ ನವಂಬರ್ 13ನೆ ಮಾರ್ಕಂ 1356—65ನೆ ನಂಬರ್ ಪ್ರೊಸಿಡಿಂಗ್ಸ್ ಪ್ರಕಾರ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ ವಿಲೆ ಇಟ್ಟಿರುವ ನಿಷ್ಪ್ರಯೋಜನವಾದ ಮತ್ತು ಅಮುಖ್ಯವಾದ ರವಿನ್ಯೂ ರಿಕಾರ್ಡುಗಳನ್ನು ನಾಶಪಡಿಸಲ್ಪಡುತ್ತೆ. ಯಾರಾದರು ದಸ್ತೈವಜುಗಳು ವಗೈರೆ ರಿಕಾರ್ಡುಗಳು ದಾಖಲೆ ಬಗ್ಗೆ ಹಾಜರ್ಪಡಿಸಿದ್ದರೆ ಅಂಥವುಗಳನ್ನು 1904ನೆ ಇಸವಿ ಡಿಸೆಂಬರ್ 31ನೆ ತಾರೀಖಿನ ಮೊಳಗಾಗಿ ಸಂಬಂಧಪಟ್ಟ ಆಫಿಸರಿಗೆ ಅಪ್ಲಿ ಕೇರ್ಪ ಮಾಡಿ ಡಿಟೋ ದಸ್ತೈವಜುಗಳನ್ನು ವಾಪಸು ಪಡಿಯಬಹುದು. ಅಲ್ಲದೆ ಮೇಲ್ಕಂಡ ರಿಕಾರ್ಡಿನ ಕಾಪಿ ಬೇಕಾಗಿದ್ದರೂ ಡಿಟೋ ತಾರೀಖಿನ ಒಳಗಾಗಿ ಖಾಯಿಷ್ ಮಾಡಿ ಪಡಿಯಬಹುದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

1697

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ, ತಾರೀಖು 7ನೆ ಅಕ್ಟೋಬರ್ 1904.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಜೋಡಿ ಬುದಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಜೋಡಿ ಬುದಹಳ್ಳಿ ಗ್ರಾಮದಲ್ಲಿ 1904ನೆ ಇಸವಿ ನವೆಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1904ನೆ ಅಕ್ಟೋಬರ್ 27ನೆ ಮುಕ್ತಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 591ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 7ನೆ ಅಕ್ಟೋಬರ್ 1904.

ತಿ. ನರಸೀಪುರ ತಾಲ್ಲೂಕಿಗೆ ಸೇರಿದ ಸರ್ವಮಾನ್ಯ ಮಡವಾಡಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ, ತಿ. ನರಸೀಪುರ ತಾಲ್ಲೂಕು ಸದರಿ ಮಡವಾಡಿ ಗ್ರಾಮದಲ್ಲಿ 1904ನೆ ಇಸವಿ ನವಂಬರ್ ಮಾಹೆ 16ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1904ನೆ ಅಕ್ಟೋಬರ್ 27ನೆ ಮುಕ್ತಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 592ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 13ನೆ ಅಕ್ಟೋಬರ್ 1904.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಜೋಡಿ ಕಲಿಯೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಟಿ. ನರಸೀಪುರ ತಾಲ್ಲೂಕು ಜೋಡಿ ಕಲಿಯೂರು ಗ್ರಾಮದಲ್ಲಿ 1904ನೆ ನವಂಬರ್ ಮಾಹೆ 14ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1904ನೆ ಅಕ್ಟೋಬರ್ 13ನೆ ಮುಕ್ತಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 590ನೆ ನಂಬರು ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು ನೆ ಅಕ್ಟೋಬರ್ 1904.

ಯಡತೊರೆ ತಾಲ್ಲೂಕು ಚುಂಚನಕಟ್ಟೆ ಹೋಬಳಿ ಸರ್ವಮಾನ್ಯ ಹೊನ್ನೂರು ಮತ್ತು ಹಳೆಯೂರು ಗ್ರಾಮಗಳನ್ನು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಗ್ರಾಮಗಳನ್ನು 1904ನೆ ಇಸವಿ ನವಂಬರ್ ಮಾಹೆ 16ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1904ನೆ ಇಸವಿ ಅಕ್ಟೋಬರ್ 27ನೆ ಮುಕ್ತಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 593-594ನೆ ನಂಬರು ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯೂಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

1904ನೆ ಇಸವಿ ಸೆಪ್ಟಂಬರ್ ತಾರೀಖು 5ನೆ ಸೋಮವಾರ ನಡೆದ ಕಡೂರು ಡಿಸ್ಟ್ರಿಕ್ಟು ಬೋರ್ಡು ವಿಷಯಂಗಿನ ನಡವಳಿಕೆಗಳು.

ಮೆ|| ಎಂ. ನಾರಾಯಣರಾಯರವರು, ಪ್ರೆಸಿಡೆಂಟ್.

ಉದ್ಯೋಗ ಪ್ರಯುಕ್ತವಾದ ಮೆಂಬರುಗಳು.

ಹಾಜರು.

1. ಮೆ|| ಟಿ. ಚೊಕ್ಕಣ್ಣನವರು, ಬಿ. ಎ., 1ನೆ ಅಸಿಸ್ಟೆಂಟ್ ಕಮಿಷನರ್.
2. ,, ಏ. ವೇದಾಂತದೇಶಿಗಂ ಐಯ್ಯಂಗಾರ್ಯವರು, ಟ್ರೆಜರಿ ಅ|| ಕಮಿಷನರ್.
3. ,, ಎಂ. ತಿರುಮಲಾಚಾರ್ಯರವರು, ಬಿ. ಎ., ಸ್ಕೂಲುಗಳ ಡೆಪ್ಯೂಟಿ ಇನ್ಸ್‌ಪೆಕ್ಟರವರು.

ಗೈರ್ ಹಾಜರು.

1. ಮೆ|| ಸಿ. ಎ. ನಂಜಪ್ಪನವರು, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರ್ (ಖಾಹಿಲೆ).
2. ,, ಹೆಚ್. ಜೆ. ಪೊಲ್ಲಾಯಿ ಸಾಹೇಬರವರು, ಎಕ್ಸಿಕ್ಯೂಟಿವ್ ಇಂಜನಿಯರ್ (ರಜಾ).
3. ,, 2ನೆ ಅ|| ಕ|| ರವರು (ಸ್ಥಳ ಖಾಲೀ).